# ಸಂಜನಾ ದಾಸ್

## ನಾಟ್ಯ–ನಟನೆಯ ಜುಗಲಬಂದಿ

**ಕನ್ನಡದ 'ಮನಸ್ಮಿತ', 'ಕೆಟಿಎಂ' ಸಿನಿಮಾಗಳಲ್ಲಿ ನಟಿಸಿರುವ ಸಂಜನಾ ದಾಸ್ ಅವರ 'ಎಲ್ಲೋ ಜೋಗಪ್ಪ ನಿನ್ನರಮನೆ...' ಸಿನಿಮಾ ಈಚೆಗೆ ಬಿಡುಗಡೆಯಾಗಿದೆ. ಭರತನಾಟ್ಯ ಕಲಾವಿದೆಯೂ ಆಗಿರುವ ಅವರಲ್ಲಿ ಸಿನಿಮಾ ಕನಸು ತುಂಬಿಕೊಂಡಿದೆ.**

■ ಸುಮಲತಾ ಎನ್



'ಎಲ್ಲೋ ಜೋಗಪ್ಪ ನಿನ್ನರಮನೆ...' ಸಿನಿಮಾದಲ್ಲಿ ತಮಿಳು ಹುಡುಗಿಯಾಗಿ ಕಾಣಿಸಿಕೊಂಡಿದ್ದ ನಟಿ ಸಂಜನಾ ದಾಸ್, ಬೆಂಗಳೂರಿನ ಬೆಡಗಿ. ಭರತನಾಟ್ಯ ಕಲಾವಿದೆ ಕೂಡ. ನಾಟ್ಯ ಕಲೆಯಿಂದಲೇ ನಟನೆಯತ್ತ ಹೊರಳಿದ ಅವರೀಗ ಸಿನಿಮಾರಂಗದಲ್ಲಿ ಹೊಸ ಸಾಧ್ಯತೆಗಳನ್ನು ಅನ್ವೇಷಿಸುತ್ತಿದ್ದಾರೆ.

ಕುಟುಂಬದಲ್ಲಿ ಯಾರಿಗೂ ಬಣ್ಣದ ನಂಟಿಲ್ಲದಿದ್ದರೂ ಭರತನಾಟ್ಯದ ಒಲವು ನಟನೆಯೆಡೆಗೂ ಇವರಲ್ಲಿ ಆಸಕ್ತಿ ಚಿಗುರಿಸಿತ್ತು. ಈ ಆಸೆಗೆ ಅಡಿಪಾಯವೆಂಬಂತೆ ಹಲವು ಜಾಹೀರಾತುಗಳಲ್ಲಿಯೂ ಕಾಣಿಸಿಕೊಂಡರು ಸಂಜನಾ. ಅದಾದ ನಂತರ ಅವರಿಗೆ ತೆರೆದುಕೊಂಡಿದ್ದೇ ಸಿನಿಮಾಲೋಕ.

'ಸುಮಾರು 20 ವರ್ಷಗಳಿಂದ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದೇನೆ. ನಾಟ್ಯದೊಂದಿಗೆ ನಟನೆಯ ಲೋಕದ ಬಗ್ಗೆಯೂ ಕುತೂಹಲ ಉಂಟಾಗಿತ್ತು. ಕಲಿಯಬೇಕು ಎಂಬ ಹುಮ್ಮಸ್ಸೂ ಇತ್ತು. ಹೀಗಾಗಿ ಕಾಲೇಜು ಓದುವಾಗ ನಟನೆ ಬಗ್ಗೆ ತಿಳಿದುಕೊಳ್ಳಲು, ಎಕ್ಸ್‌ಪ್ಲೋರ್ ಮಾಡಲು ಶುರುಮಾಡಿದೆ. ಆನಂತರ ಸಿನಿಮಾರಂಗಕ್ಕೇ ಬರಬೇಕೆಂದು ದೃಢ ನಿರ್ಧಾರ ಮಾಡಿದೆ' ಎಂದು ತಮ್ಮ ದಾರಿಯನ್ನು ತೆರೆದಿಡುತ್ತಾರೆ ಸಂಜನಾ.

ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಮನಶಾಸ್ತ್ರ ಹಾಗೂ ಕಮ್ಯುನಿಕೇಟಿವ್ ಇಂಗ್ಲಿಷ್ ಪದವಿ ಓದುತ್ತಿದ್ದ ಸಂಜನಾ ಅವರ ಮನಸ್ಸನ್ನು ಸದಾ ಕಾಡುತ್ತಿದ್ದುದು ಮಾತ್ರ ನಟನೆ ಎಂಬ ಮಾಯಾಲೋಕ.

'ನಮ್ಮ ಕುಟುಂಬದಲ್ಲಿ ಹೆಚ್ಚಾಗಿ ವೈದ್ಯರು, ಎಂಜಿನಿಯರುಗಳೇ ಇದ್ದರು. ನಟನೆಗೆ ಯಾರೂ ಬಂದಿರಲಿಲ್ಲ. ಆದರೆ ನನಗೇಕೋ ಈ ಕಡೆ ತುಡಿತ ಹೆಚ್ಚಾಗಿತ್ತು. ಸೈಕಾಲಜಿ ಓದಿದ್ದರೂ ಮನಸ್ಸು ಮಾತ್ರ ಅಭಿನಯದತ್ತಲೇ ವಾಲಿತ್ತು' ಎಂದು ನಗುತ್ತಾರೆ. ಅಭಿನಯಕ್ಕೆ ಪೂರ್ವ ತಯಾರಿಯೂ ಮುಖ್ಯವೆಂಬ ಕಾರಣಕ್ಕೆ ನಟನೆಯ ಮೂಲ ಪಟ್ಟುಗಳನ್ನು ಕಲಿಯಲು ಅಭಿನಯ ತರಬೇತಿಯಲ್ಲಿಯೂ ತೊಡಗಿಕೊಂಡರು. ಆ ಕಲಿಕೆ ಅವರಿಗೆ ಸಿನಿಮಾವೊಂದರ ಅವಕಾಶವನ್ನು ತಂದಿತ್ತು.

'ಮನಸ್ಮಿತ' ಸಿನಿಮಾ ಸಂಜನಾ ಅವರಿಗೆ ಸಿನಿಮಾರಂಗಕ್ಕೆ ಪ್ರವೇಶ ಪಡೆಯಲು ಮೊದಲ ಹೆಜ್ಜೆಯಾಯಿತು. ಕಲಾ ಪ್ರಧಾನ ಸಿನಿಮಾ ಅದಾಗಿದ್ದು, ಹದಿನೇಳನೇ ವಯಸ್ಸಿಗೆ ಆ ಸಿನಿಮಾದಲ್ಲಿ ನಟಿಸಿದ ಅನುಭವ ಅನೂಹ್ಯವಾದದ್ದು ಎನ್ನುತ್ತಾರೆ.

''ಯಾವುದೇ ಒಂದು ಪಾತ್ರ ಆಳವಾಗಿ ನಮ್ಮಲ್ಲಿ ಬೇರು ಬಿಡುವಂತಿರಬೇಕು. 'ಮನಸ್ಮಿತ' ಅಂಥ ಅನುಭವ ನೀಡಿತ್ತು. ಪಾತ್ರದಲ್ಲಿಯೇ ಮುಳುಗಿಹೋಗುವಂಥ ಅನುಭವ. ಮೂವತ್ತು ನಲವತ್ತು ದಿನ ಆ ಪಾತ್ರವೇ ನಾನಾಗಿದ್ದೆ'' ಎಂದು ವಿವರಿಸುತ್ತಾರೆ. 'ಮನಸ್ಮಿತ' ನಂತರ ದೀಕ್ಷಿತ್ ಶೆಟ್ಟಿ ಜೊತೆ ನಟಿಸುವ ಅವಕಾಶ 'ಕೆಟಿಎಂ' ಸಿನಿಮಾ ಮೂಲಕ ಒದಗಿಬಂದಿತ್ತು. ಕನ್ನಡದಲ್ಲಿ ಮೊದಲ ಕಮರ್ಷಿಯಲ್ ಸಿನಿಮಾ ಬಿಡುಗಡೆ ಆದದ್ದು ಅವರ ಪಾಲಿಗೆ ಹೊಸ ದಿಕ್ಕನ್ನು ತೋರಿತ್ತು.

ಕನ್ನಡದ ಜೊತೆ ಮಲೆಯಾಳಂ ಸಿನಿಮಾದಲ್ಲಿಯೂ ತೊಡಗಿಕೊಂಡರು. 'ಮೂನ್‌ವಾಕ್' ಎಂಬ ಮಲೆಯಾಳಂ ಸಿನಿಮಾ ಅವರಿಗೆ ಮತ್ತೊಂದು ಸುಂದರ ಅನುಭವವನ್ನು ಜೊತೆಯಾಗಿಸಿತು. ಇಂಗ್ಲಿಷ್ ವೆಬ್‌ಸೀರೀಸ್ ಒಂದರಲ್ಲೂ ತೊಡಗಿಕೊಂಡಿದ್ದ ಸಂಜನಾ ಪಾಲಿಗೆ ಇಂಥವೇ ಅವಕಾಶಗಳು ಒಂದಾದ ಮೇಲೆ ಒಂದರಂತೆ ಎಡತಾಕಿದವು.

ಗಾಯಕ ಸಂಜಿತ್ ಹೆಗ್ಡೆ ಜೊತೆ 'ನಂಗೆ ಅಲ್ಲವಾ' ಎಂಬ ಮ್ಯೂಸಿಕ್ ಆಲ್ಬಂನಲ್ಲಿಯೂ ಜೊತೆಯಾದದ್ದು ಹೆಸರಿನೊಂದಿಗೆ ಹೊಸ ಅನುಭವವನ್ನೂ ನೀಡಿತ್ತು.

ಈಚೆಗೆ ಹಯವದನ ನಿರ್ದೇಶನದ 'ಎಲ್ಲೋ ಜೋಗಪ್ಪ ನಿನ್ನರಮನೆ...' ಸಿನಿಮಾದಲ್ಲಿ 'ಸ್ವರ' ಎಂಬ ತಮಿಳು ಹುಡುಗಿ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಯೂಟ್ಯೂಬರ್ ಆಗಿದ್ದು, ಅಡ್ವೆಂಚರಸ್ ವ್ಯಕ್ತಿತ್ವ, ಲಿವಿಂಗ್ ಇನ್ ದಿ ಮೂಮೆಂಟ್‌ನಂಥ ಪಾತ್ರ ಸಿಕ್ಕಿದ್ದು ವರ್ಸಟಾಲಿಟಿಗೆ ಒಂದು ಅವಕಾಶ ನೀಡಿದೆ ಎಂಬ ಖುಷಿಯೂ ಅವರಲ್ಲಿದೆ.

ತಮಗೆ ಸಿಗುವ ಯಾವುದೇ ಪಾತ್ರವಿರಲಿ, ಅದಕ್ಕೆ ಅದರದ್ದೇ ಆದ ಒಂದು ಸೌಂದರ್ಯ, ಲಯವಿರಬೇಕು ಎಂದು ಬಯಸುವ ಸಂಜನಾ ಅವರ 'ಕಂಗ್ರಾಜುಲೇಷನ್ಸ್ ಬ್ರದರ್' ಎಂಬ ಸಿನಿಮಾ ಕೂಡ ಬಿಡುಗಡೆಯ ಹಾದಿಯಲ್ಲಿದೆ. ■